


ಅಭ್ಯಾಸದ ಸಂದರ್ಭದಲ್ಲಿ ಈಜುಕೊಳದಲ್ಲಿ ಭಾರತೀಯ ಆಟಗಾರರ ಮೋಜು

'ಡೈಯಿಂಗ್ ಮೊಮೆಂಟ್ಸ್' – ಆಟದ ತುರುಸಿನ ಕ್ಷಣಗಳನ್ನು ಬಣ್ಣಿಸಲು ವೀಕ್ಷಕ ವಿವರಣೆಗಾರರು ಬಳಸುವ ಇಂಗ್ಲಿಷ್ ನುಡಿಗಟ್ಟು ಇದು. ಹಾಕಿಯಲ್ಲೂ ಇಂಥ ಉಸಿರುಗಟ್ಟಿಸಿದ ಸಂದರ್ಭಗಳು ಎದುರಾಗುತ್ತಲೇ ಇರುತ್ತವೆ. ಈ ಶತಮಾನದ ಹದಿನೆಂಟು ವರ್ಷಗಳಲ್ಲಿ ಕಂಡ ಅಂಥ ಕೆಲವು ಕ್ಷಣಗಳನ್ನು ಗಮನಿಸೋಣ. ಸಿಡ್ನಿ ಒಲಿಂಪಿಕ್ಸ್ 2000, ಪೋಲೆಂಡ್ ಎದುರು 69ನೇ ನಿಮಿಷ. ನಾಲ್ಕು ವರ್ಷಗಳ ನಂತರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಅರ್ಜೆಂಟಿನಾ ವಿರುದ್ಧ 69ನೇ ನಿಮಿಷ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ಮೇಲೆ 65ನೇ ನಿಮಿಷ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಕೆನಡಾ ಎದುರಿನ ಪಂದ್ಯದಲ್ಲಿ 52ನೇ ನಿಮಿಷ – ಈ ಎಲ್ಲ ಕ್ಷಣಗಳ ಆಟಗಳಲ್ಲೂ ಭಾರತದ ಹಾಕಿ ಆಟಗಾರರು ಹ್ಯಾಪುಮೋರೆ ಹಾಕಿಕೊಂಡಿದ್ದಾರೆ ಅರ್ಥಾತ್ ಎದುರಾಳಿ ತಂಡಕ್ಕೆ ಗೋಲನ್ನು ಕೊಟ್ಟಿದ್ದಾರೆ ಅಥವಾ ತಾವು ಗೋಲು ಗಳಿಸುವ ಅವಕಾಶವನ್ನು ಪರಿವರ್ತಿಸಿಕೊಳ್ಳಲಾಗದೆ ಪರಿತಪಿಸಿದ್ದಾರೆ.

ಒಲಿಂಪಿಕ್ಸ್ ಮಾತು ಹಾಗಿರಲಿ; ಈ ಸಲದ ಏಷ್ಯನ್ ಗೇಮ್ಸ್ ನೋಡಿ. ಸೆಮಿಫೈನಲ್ಸ್‌ನಲ್ಲಿ ಮಲೇಷ್ಯಾ ತಂಡದವರೂ ಭಾರತದ ಆಟಗಾರರನ್ನು ಸೋಲಿಸಿಬಿಟ್ಟರು. 2010ರ ಏಷ್ಯನ್ ಗೇಮ್ಸ್‌ನಲ್ಲೂ ಮಲೇಷ್ಯಾ ತಂಡವೇ ಕಾಡಿದ್ದು ನಮ್ಮ ಆಟಗಾರರ ಸ್ಮೃತಿಪಟಲದಲ್ಲಿ ಉಳಿದಿರಲಿಕ್ಕೆ ಸಾಕು.

2015ರಲ್ಲಿ ಛತ್ತೀಸಗಡದಲ್ಲಿ ನಡೆದ ಹಾಕಿ ವಿಶ್ವ ಲೀಗ್‌ನಲ್ಲಿ 33 ವರ್ಷಗಳ ನಂತರ ಮೊದಲ ಜಾಗತಿಕ ಪದಕ ಗೆದ್ದಿದ್ದು ನಮ್ಮ ದೇಶದ ಪಾಲಿಗೆ ಹರುಷದ ಸಂದರ್ಭ. ಆಗಲೂ ನೆದರ್‌ಲ್ಯಾಂಡ್ಸ್ ಎದುರು ಶೂಟ್‌ಔಟ್ ಮೂಲಕ ಪದಕ ಗೆಲ್ಲಬೇಕಾಗಿ ಬಂದದ್ದು ತಂಡದ ಸ್ಥಿತಿಗೆ ಹಿಡಿದ ಕನ್ನಡಿ. ಯಾಕೆಂದರೆ, ಪಂದ್ಯದ ಅವಧಿ ಮುಗಿಯಲು ಎರಡು ನಿಮಿಷಗಳಿದ್ದಾಗ 5–3ರಲ್ಲಿ ಮುಂದಿದ್ದ ಭಾರತ ಆಮೇಲೆ ಎದುರಾಳಿಗೆ ಎರಡು ಗೋಲು ಗಳಿಸಲು ಬಿಟ್ಟು, ಶೌಟ್‌ಔಟ್ ಸ್ಥಿತಿ ತಂದುಕೊಂಡಿದ್ದನ್ನು ಅನೇಕರು ಟೀಕಿಸಿದ್ದರು.

ಒಡಿಶಾದ ಭುವನೇಶ್ವರದಲ್ಲಿ ಇದೇ 28ರಿಂದ ಪ್ರಾರಂಭವಾಗಲಿರುವ ಪುರುಷರ ಹಾಕಿ ವಿಶ್ವಕಪ್‌ಗೆ ಈಗಾಗಲೇ ಕ್ರೀಡಾಪ್ರೇಮಿಗಳು ಮನಸ್ಸನ್ನು ಸಜ್ಜುಗೊಳಿಸಿಕೊಂಡು ಕುಳಿತಿದ್ದಾರೆ. ಡಿಸೆಂಬರ್ 16ರವರೆಗೆ ಹಾಕಿಯದ್ದೇ ಧ್ಯಾನ. ಯಾವ ತಂಡ ಬಲಾಢ್ಯ ಎನ್ನುವ ಚರ್ಚೆಯ ಸಂದರ್ಭದಲ್ಲಿ ಭಾರತದ ಜಂಘಾಬಲದ ಕುರಿತು ಸಂವಾದ ನಡೆಯುವುದೂ ಸಹಜವೇ.

## ಸ್ವಾತಂತ್ರ್ಯಪೂರ್ವ ದಿನಗಳ ಸ್ವರ್ಣಯುಗ

ಹಾಕಿ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ 1947ರವರೆಗಿನ 'ಹಾಕಿ ಶಕ್ತಿ' ಭಾರತ. 1928ರಲ್ಲಿ ಮೊದಲ ಒಲಿಂಪಿಕ್ಸ್ ಚಿನ್ನ ಗೆದ್ದಾಗಿನಿಂದ ಸಿಕ್ಕಿದ್ದ ಪಟ್ಟ ಅದು. 1932, 36, 48, 52, 56, 64, 1980 – ಹೀಗೆ 20ನೇ ಶತಮಾನದ ವರ್ಷಗಳಲ್ಲಿ ಒಲಿಂಪಿಕ್ಸ್ ಬಂಗಾರಗಳನ್ನು ಸಾಲು ಸಾಲಾಗಿ ಗೆದ್ದ ತಂಡ ನಮ್ಮದು. ಪಂಜಾಬ್ ಹಾಗೂ ಉತ್ತರ ಪ್ರದೇಶದ ಆಟಗಾರರೇ ಹೆಚ್ಚಾಗಿ ಇದ್ದ ಸಮರ್ಥ ತಂಡ ಅದು. ಮುಸ್ಲಿಮರ ಸಂಖ್ಯೆಯೂ ತಂಡದಲ್ಲಿ ಎದ್ದುಕಾಣುವಂತಿತ್ತು. ಸ್ವಾತಂತ್ರ್ಯಾನಂತರ ತಂಡ ಸಹಜವಾಗಿಯೇ ಒಡೆಯಿತು. ಪಾಕಿಸ್ತಾನದ ಇನ್ನೊಂದು ಹೋಳು ಸೇರಿದ ಆಟಗಾರರು ಅತ್ತಕಡೆ. ಉಳಿದವರು ಇತ್ತಕಡೆ. 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಭಾರತವು ಪಾಕಿಸ್ತಾನದ ಎದುರೇ ಸೋತ ಕಹಿ ನೆನಪು ಅನೇಕರನ್ನು ಇನ್ನೂ ಕಾಡುತ್ತಿರಲು ಇದೂ ಒಂದು ಕಾರಣ.

1980ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ನಗು ಬೀರಿದ ಮೇಲೆ ಭಾರತದ ಹಾಕಿಯ ಪರಿಸ್ಥಿತಿ ಏನಾಯಿತು? 1975ರಲ್ಲಿ ವಿಶ್ವಕಪ್ ಗೆದ್ದಿದ್ದು ಬಿಟ್ಟರೆ